485

ಸದರೀ ದರಖಾಸ್ತುದಾರನಾದ ಕೃಷ್ಣಶಾಸ್ತ್ರಿಯು ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪಶಾಸ್ತ್ರಿಯ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1896—97ನೇ ಇಸವಿ ಅರ್ಜೀ ನಂಬರ್ 89.

ಮೃತಪಟ್ಟ ಶೃಂಗೇರಿ ಮೇಲ್‌ಪಾಲ್ ಸುಂಕುರಡಿ ವಾಸಸ್ಥರಾದ ಹಳೆ ಮನೆ ರಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಗಿರಿಯಮ್ಮ ಯಾನೆ ಸಾವಿತ್ರಮ್ಮ, ಮೃತಪಟ್ಟ ಸದರೀ ರಾಮಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಶೃಂಗೇರಿ ಮೇಲ್‌ಪಾಲ್ ಸುಂಕುರಡಿ ಸ್ಥಳದ ಗಿರಿಯಮ್ಮ ಯಾನೆ ಸಾವಿತ್ರಮ್ಮನವರು, ಸದರೀ ಸುಂಕುರಡಿ ವಾಸಸ್ಥರಾಗಿ ಮೃತಪಟ್ಟ ರಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 2000 ರೂಸಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಿರಿಯಮ್ಮ ಯಾನೆ ಸಾವಿತ್ರಮ್ಮನವರ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಸೆಪ್ಟಂಬ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಬರಂತಾದ ತಪ್ಪಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂರ್ಪಗಳಿಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರೀತಿ ಕೊಡುವ ಬಗ್ಯಾಗಿ ಆಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಮೈಸೂರ ಗೆಜೆಟ್ ಚಂದಾ ದರ ವಗ್ಯೆರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚೆಫ್ ಮೊಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಷ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮುಕ್ತಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಪಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮಕ್ತುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಂಡ ಪಟೇಲರಿಗೂ ಲಗಾವಿ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸುಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.		
ಡ್ರಾಫ್ಟಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ " ..	5	0
ಖಾಸಗೀ ಪ್ರಕಟಣೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಟ್ಟಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0	4

ಸೂಚನೆ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಎಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದ್ದಪಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಬಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇನ್ನಿತರ ಜಾಹೀರಾತುಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ಒಳಗಾಗಿ ಕಂಪ್ಯೆಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು. ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪ್ಯೆಲರ್.

Mysore Govt. Central Press, Bangalore.—1896.